

ಓಲ್ಡೆವಾಟ್ನೆಟ್ ಸರೋವರ



ಹೆಪ್ಪುಗಟ್ಟಿದ ಬಕ್ಸ್ಡಾಲ್ಸ್ ಬ್ರೀನ್ ಹಿಮನದಿಯಿಂದ ಕರಗಿ ಓಡುತ್ತಿರುವ ಓಲ್ಡೀಲ್ವ

ಶಾಲಿನ ನಡುವೆ ಸುತ್ತು ಬಳಸುತ್ತ ಸಾಗುತ್ತದೆ. ಎಡಕ್ಕೊಮ್ಮೆ, ಬಲಕ್ಕೊಮ್ಮೆ ಕಾಡಿನ ಮಧ್ಯೆ ರಭಸದಿಂದ ಹರಿಯುವ ನೊರೆ ನೊರೆಯಾದ ಓಲ್ಡೀಲ್ವ ನದಿ ಕಣ್ಣಾಮುಚ್ಚಾಲೆ ಆಡುತ್ತ ಜೊತೆ ನೀಡುತ್ತದೆ. ಸಾಹಸಪ್ರಿಯರು ಈ ನದಿಯಲ್ಲಿ ರಾಫ್ಟಿಂಗ್ ಮಾಡಬಹುದು. ನಡು ದಾರಿಯಲ್ಲಿ ನೀಲ ಹಸಿರು ಮಿಶ್ರಿತ (turquoise) ಬಣ್ಣದ ಕಣ್ಣಟ್ಟುವ ಓಲ್ಡೆವಾಟ್ನೆಟ್ ಎಂಬ ಸರೋವರ ಸಿಗುತ್ತದೆ. ಇದರ ಸೌಂದರ್ಯ ವರ್ಣನೆಗೆ ನಿಲುಕದಂಥದ್ದು.

ಈ ಸರೋವರವನ್ನು ಸುತ್ತು ಹಾಕುತ್ತ ಬಸ್ಸು ಬಕ್ಸ್ಡಾಲ್ಸ್ ಬ್ರೀನ್ ತಪ್ಪಲಿಗೆ ಬಂದಿಳಿದಾಗ ಎದುರು ಧುತ್ತನೆ ಎದುರಾಗುವುದು ನೂರಾರು ಮೀಟರ್ ಎತ್ತರದ ಅನಾಮಧೇಯ ಜಲಪಾತ. ನಾರ್ವೆಯಲ್ಲಿ ಕಣ್ಣು ಹಾಯಿಸಿದಲ್ಲೆಲ್ಲ ಜಲಪಾತಗಳು. ಪರ್ವತಗಳ ತುದಿಯಲ್ಲಿ ಮಡುಗಟ್ಟಿರುವ ಹಿಮ! ಮೊದಲೇ ಜನಸಂಖ್ಯೆ ವಿರಳ, ಕಾಣುವ ಜಲಪಾತಗಳಿಗೆಲ್ಲ ಹೆಸರಿಡುವಷ್ಟು ವ್ಯವಧಾನ ಯಾರಿಗಿದ್ದೀತು? ಜನರಿಗಿಂತಲೂ ಜಲಪಾತಗಳ ಸಂಖ್ಯೆಯೇ ಜಾಸ್ತಿ ಇದೆಯೇನೋ ಎಂಬ ಅನುಮಾನ ನನಗಿದೆ.

ತಪ್ಪಲಿನ ತಂಗುದಾಣದಿಂದ ಹಿಮನದಿಯ ಬುಡಕ್ಕೆ ಸುಮಾರು 200 ಮೀಟರ್ ಏರನ್ನು 2.5–3 ಕಿ.ಮೀ. ದೂರದಲ್ಲಿ ಕ್ರಮಿಸುವಂತೆ ದಾರಿ ಮಾಡಿದ್ದಾರೆ. ಹತ್ತಲು ತೊಂದರೆಯಿದ್ದವರಿಗೆ ವಿದ್ಯುಚ್ಚಾಲಿತ ಗಾಡಿಗಳ ವ್ಯವಸ್ಥೆಯಿದೆ. ದಾರಿಯುದ್ದಕ್ಕೂ ಬರ್ಚ್‌ನಂತಹ ಮರಗಳ ಲಘು ಕಾಡು, ಬಣ್ಣಬಣ್ಣದ ಹೂವುಗಳನ್ನು ತೊಟ್ಟ ಗಿಡಗಳು ಮನಸ್ಸನ್ನು ಮುದಗೊಳಿಸುತ್ತ ಹಾದಿಯ ದೂರವನ್ನು ಕುಗ್ಗಿಸುತ್ತವೆ. ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಹಿಮನದಿಯಿಂದ ಕರಗಿ ಬರುವ ನದಿ ಕ್ಲೇಯ್ವಫಾಸ್ಸೇನ್ (Kleivafossen) ಎಂಬ ಭರ್ಜರಿ ಜಲಪಾತ ಎದುರಾಗುತ್ತದೆ. ಇದರ ಶಕ್ತಿ ಅಗಾಧ. ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ದಾಟುವಾಗ ಆಹ್ಲಾದಕರವಾದ ತುಂತುರು ವೃಷ್ಟಿ ಬಿಸಿಲಿದ್ದ ದಿನ ಮೈಮನಗಳನ್ನು ತಂಪಾಗಿಸುತ್ತದೆ. ಆಗ ಸೃಷ್ಟಿಯಾಗುವ ಕಾಮನಬಿಲ್ಲನ್ನು ನೋಡುತ್ತಾ ಇಡೀ ದಿನ ಕುಳಿತಿರಬಹುದು.

ಗಡಿಬಿಡಿಯಲ್ಲಿ ಕೆಳಮುಖವಾಗಿ ಓಡುತ್ತಿರುವ ನದಿಯ ಪಕ್ಕದಲ್ಲಿ ಊರ್ಧ್ವಮುಖವಾಗಿ ಸಾಗುವ ಕಾಲುಹಾದಿಯಲ್ಲಿ ಹಿಮನದಿ ಹಾಗೂ ಅಲ್ಲಿನ ಭೂಭಾಗದ ಮಾಹಿತಿಯನ್ನು ಕೊಡುವ ಫಲಕಗಳನ್ನು ನಿಲ್ಲಿಸಿದ್ದಾರೆ. ಬಕ್ಸ್ಡಾಲ್ಸ್ ಬ್ರೀನ್ ನಿಜವಾಗಿಯೂ ಯೂರೋಪಿನಲ್ಲೇ ಅತಿ ದೊಡ್ಡದಾದ ಜೋಸ್ಟೆಡಾಲ್ಸ್ ಬ್ರೀನ್ ಎಂಬ ಅಗಾಧ ಹಿಮನದಿಯ 50 ಬಾಹುಗಳಲ್ಲೊಂದು. ಅತಿ ಸುಲಭವಾಗಿ ನೋಡಲು ಸಿಗುವುದೇ ಬಕ್ಸ್ಡಾಲ್ಸ್ ಬ್ರೀನ್ ಮುಖ್ಯ ಆಕರ್ಷಣೆ.

ಭೂಮಿಯ ಒಡಲಿನಿಂದ ಉಕ್ಕಿ ಪದರ ಪದರವಾಗಿ ಹೆಪ್ಪುಗಟ್ಟಿರುವ ಪಾರದರ್ಶಕ ಬಿಳಿನೀಲ ಬಣ್ಣದ ನೀರ್ಗಲ್ಲು ಹನಿ ಹನಿಯಾಗಿ ತೊಟ್ಟಿಕ್ಕುತ್ತ ಬುಡದಲ್ಲಿ ಮಡುಗಟ್ಟಿ ನಿಂತಿದೆ. ಪರ್ವತದ ಶಿಲೆಗಳನ್ನು ಕೊರೆದು ತಂದ ಅದೆಷ್ಟೋ ಖನಿಜಗಳ ಮಿಶ್ರಣವಾಗಿರುವುದರಿಂದ ಮಡು ಗಾಢ ನೀಲ ಬಣ್ಣದ್ದಾಗಿದೆ. ಇದೇ ಕಾರಣಕ್ಕಾಗಿ ಈ ನೀರು ಕುಡಿಯಲು ಯೋಗ್ಯವಲ್ಲ! ಕಳೆದ ಎರಡು ದಶಕಗಳಲ್ಲಿ ಬಕ್ಸ್ಡಾಲ್ಸ್ ಬ್ರೀನ್ ಸುಮಾರು ಅರ್ಧ ಕಿ.ಮೀ.ನಷ್ಟು ಹಿಮ್ಮೆಟ್ಟಿದೆಯಂತೆ. ಇಲ್ಲಿ ಆಗುವ ಹಿಮಪಾತ ಇದರ ಗಾತ್ರವನ್ನು ನಿರ್ಧರಿಸಿದರೂ 20–21ನೇ ಶತಮಾನದಲ್ಲಿ ಏರಿರುವ ಉಷ್ಣತೆ ಹಿನ್ನೆಲೆಯಲ್ಲಿರುವುದು ಕಟು ಸತ್ಯ.

ಅದರೊಟ್ಟಿಗೆ ಪ್ರಕೃತಿಯ ಅಗಾಧತೆ, ಅಲ್ಲಿ ಅಡಗಿರುವ ಅದಮ್ಯ ಚೈತನ್ಯ, ಬೆಡಗು ಇವನ್ನೆಲ್ಲ ಅನುಭವಿಸುತ್ತ ಉಕ್ಕಿದ ಭಾವನೆಗಳೂ ಬಣ್ಣಿಸಲಸದಳ. ಶತಮಾನಗಳಿಂದ ಉದುರಿದ ಹಿಮವನ್ನು ಒಡಲಲ್ಲಿ ಒತ್ತಿಟ್ಟುಕೊಂಡು, ಹನಿಹನಿಯಾಗಿ ತೊಟ್ಟಿಕ್ಕಿಸಿ ಬೆಳೆಸಿದ ಮಡುವಿನಿಂದ ಹೊಮ್ಮುವ ನದಿ, ಇನ್ನಿಲ್ಲದ ಗಡಿಬಿಡಿಯಿಂದ ಗುಡ್ಡವನ್ನು ಜಾರಿ ಅನತಿ ದೂರದಲ್ಲಿರುವ ಸಾಗರವನ್ನು ಸೇರುವ ಈ ಯಾನ ಮರೆಯಲಾಗದ್ದು.



ಓಲ್ಡೆನ್‌ನಲ್ಲಿ ತಂಗಿರುವ ಅಯೋನ ನೌಕೆ